ದ್ದಾರೆ. ಯಾರು ಯಾರು ಎಷ್ಟೆಷ್ಟು ಹಂಚಿಕೊಳ್ಳಬೇಕು ಎಂಬ ಬಗ್ಗೆ ವ್ಯವಸ್ಥೆ ಆಗಿ ಈಗಾಗಲೇ ಹಂಚಿಕೆ ಆಗುತ್ತಿದೆ. ಇದರ ಬಗ್ಗೆ ಪ್ರಸ್ತಾಪಿಸಲಿಕ್ಕಾಗಿ ಇಷ್ಟೊಂದು ದಾಖಲೆಗಳನ್ನು ಇಟ್ಟುಕೊಂಡು ಅಧಿಕಾರಿಗಳಿಗೆ ಹೇಳಿದರೂ ಸಹ ಅವರು ಕೇಳಲಿಲ್ಲ. ನಾಳೆ ಅಸೆಂಬ್ಲಿ ಮುಗಿಯುತ್ತದೆ. ಆಷ್ಟರಲ್ಲಿ ಅವರು ಹಂಚಿಕೊಂಡು ಮನೆಗೆ ಹೋಗುತ್ತಾರೆ. ನಾವೂ ಊರ ಕಡೆ ಹೋಗುತ್ತೇವೆ. ಇದು ೫೦ ಕೋಟಿ ರೂಪಾಯಿಗಳ ವ್ಯವಹಾರ.

ಅಧ್ಯಕ್ಷರು.— ಆ ದಾಖಲೆಗಳನ್ನು ದಯವಿಟ್ಟು ನನ್ನ ಕಡೆ ಕಳುಹಿಸಿಕೊಡಿ.

ಶ್ರೀ ಬಿ. ಸ್ವಾಮಿರಾವ್. — ಕಳುಹಿಸಿಕೊಡುತ್ತೇನೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.— ಈ ಬಗ್ಗೆ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವಾಗ ಮಾತನಾಡೋಣ ಎಂದು ಇದ್ದೆ. ಇದು ನನ್ನ ಗಮನಕ್ಕೂ ಬಂದಿದೆ. ಎಕ್ಸ್‌ಪ್ಲಾನೇಷನ್ ಆಫ್ ಟೆಕ್ನಿಕಲ್ ಎಜುಕೇಷನ್ ಎಂದು ಹೇಳಿ ಮಾತನಾಡಿದ್ದಾರೆ. ಇದು ಯಾವ ರೀತಿ ಆಗುತ್ತಿದೆ ಎಂದು ಹೇಳಿದ್ದಾರೆ. ಆ ದಾಖಲೆಗಳೂ ನನ್ನ ಕಡೆ ಪೂರ್ತಿ ಬಂದಿದೆ ಒಂದು ಹೆಚ್‌ಪಿ ಮೋಟಾರ್‌ಗೆ ೩೨ ಸಾವಿರ ಚಾರ್ಜ್ ಮಾಡಿದ್ದಾರೆ. ಮತ್ತೆ...

ಅಧ್ಯಕ್ಷರು.— ನಾಳೆ ಇದನ್ನು ತೆಗೆದುಕೊಳ್ಳೋಣ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.— ಇನ್ನೊಂದು ವಿಚಾರವೆಂದರೆ ಯಾರು ಪ್ರಾಮಾಣಿಕವಾಗಿ ಇದನ್ನೆಲ್ಲ ಪತ್ತೆ ಮಾಡಿದ್ದಾರೋ, ಅವರನ್ನು ಸಸ್ಪೆಂಡ್ ಮಾಡಿದ್ದಾರೆ. ಇದರ ಬಗ್ಗೆ ತಾವು...

ಅಧ್ಯಕ್ಷರು.— ನಾಳೆ ಕಾಲಿಂಗ್ ಅಟೆನ್‌ಷನ್ನಾಗಿ ಇದನ್ನು ತೆಗೆದುಕೊಳ್ಳುವೆ.

ಶ್ರೀ ವಾಟಾಳ್‌ನಾಗರಾಜ್.— ನಿನ್ನೆ ವಿದ್ಯುತ್ ಸಚಿವರು ಎಷ್ಟು ಪ್ರಮಾಣದಲ್ಲಿ ವಿದ್ಯುತ್ತನ್ನು ಪಂಪ್‌ಸೆಟ್ಟುಗಳಿಗೆ ಹೆಚ್ಚು ಮಾಡುತ್ತೇವೆಂಬ ಬಗ್ಗೆ ಹೇಳಿಕೆ ನೀಡುವುದಾಗಿ ಹೇಳಿದ್ದರು. ಈಗ ಮಾನ್ಯ ಸಚಿವರಿದ್ದಾರೆ. ಚಾಮರಾಜನಗರಕ್ಕೆ ಸಂಬಂಧಪಟ್ಟಂತೆ ಅವರು ಈ ಸಭೆಗೆ ಮಾಹಿತಿ ಒಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

PAPERS LAID ON THE TABLE

SRI B. BASAVALINGAPPA (Minister for Rural Development and Panchayat Raj).— Mr. Speaker Sir, On behalf of the Minister for Finance, I beg to lay.

Report of the Comptroller and Auditor General of India for the year ended 31st March, 1988 of the Government of Karnataka (No. 4) (Commercial)

as required under Article 151 (2) of Constitution of India.

MR. SPEAKER.— Papers laid.

ಸಾರ್ವಜನಿಕ ಮಹತ್ವದ ವಿಷಯಗಳ ಬಗ್ಗೆ ಪ್ರಸ್ತಾಪ

ಆಟೋರಿಕ್ಷಾದವರ ಮುಷ್ಕರದ ಬಗ್ಗೆ

† ಶ್ರೀ ಪಿ. ಜಿ ಆರ್. ಸಿಂಧ್ಯಾ.— ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ನಾನು ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಬೆಂಗಳೂರು ನಗರದಲ್ಲಿ ನಿನ್ನೆಯಿಂದ ಸುಮಾರು ಮೂವತ್ತೈದು ಸಾವಿರಕ್ಕೂ ಹೆಚ್ಚು ಜನ ಆಟೋರಿಕ್ಷಾ ಮಾಲೀಕರು ಮತ್ತು ಆಟೋರಿಕ್ಷಾ ಚಾಲಕರು ಮುಷ್ಕರವನ್ನು ಮಾಡಿರುವುದರಿಂದಾಗಿ ಸುಮಾರು ಎರಡು-ಎರಡೂವರೆ ಲಕ್ಷ ಸಾಮಾನ್ಯ ವರ್ಗದ ಜನರಿಗೆ ಪ್ರಯಾಣ ಮಾಡತಕ್ಕಂಥವರಿಗೆ ಬಹಳ ತೊಂದರೆಯಾಗಿದೆ. ಇದರ ಕಡೆಗೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ ಎಂದು ನಮಗೆ ನಿರ್ದಿಷ್ಟವಾಗಿ ಗೊತ್ತಿಲ್ಲ. ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ನೋಡಿದರೆ

†ಈ ಚಿಹ್ನೆ ಸಂಬಂಧಪಟ್ಟ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಆಟೋರಿಕ್ಷಾ ಚಾಲಕರ ಸಂಘದವರಿಗೆ ಸಾರಿಗೆ ಮಂತ್ರಿಗಳೇ ಸಿಕ್ಕಿಲ್ಲ ಎನ್ನುವ ವಿಚಾರ ಪ್ರಸ್ತಾಪವಾಗಿದೆ. ಆದ್ದರಿಂದ ದಯವಿಟ್ಟು ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಂಡಿದೆ, ಅಥವಾ ಏನು ಕ್ರಮವನ್ನು ಕೈಗೊಳ್ಳಬೇಕು ಎಂದು ಮಾಡಿದ್ದಾರೆ ಎಂದು ನಮಗೆ ಗೊತ್ತಾಗಬೇಕು. ಏಕೆಂದರೆ ನಾಳೆ ಸದನ ಮುಂಗಿಯುತ್ತದೆ. ಪ್ರಯಾಣಿಕರಿಗೆ ತೊಂದರೆಯಾಗಿರುವುದರಿಂದ ಈ ಬಗ್ಗೆ ಏನು ತೀರ್ಮಾನ ತೆಗೆದು ಕೊಂಡಿದ್ದೀರಿ ಎನ್ನುವುದನ್ನು ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಬಹಳ ಗಂಭೀರವಾಗಿರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಬಗ್ಗೆ ನಾನು ಕೂಡಾ ಸೂಚನೆಯನ್ನು ತಮಗೆ ಕಳುಹಿಸಿದ್ದೆ. ಅವರು ಅಲ್ಲಿ ಏನು ಮುಷ್ಕರ ಮಾಡುತ್ತಿದ್ದಾರೆ, ಅವರ ಜೊತೆಯಲ್ಲಿ ಒಂದು ಮಾತುಕತೆ ಆಡಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ತೀರ್ಮಾನವನ್ನು ಕೈಗೊಳ್ಳುವುದು ಒಳ್ಳೆಯದು. ನ್ಯಾಯಾಲಯಕ್ಕೆ ಹೋಗುವವರಿಗೆ, ಕಾರ್ಯಾಲಯಕ್ಕೆ ಹೋಗುವವರಿಗೆ, ಪಂತ್ತು ವಿಧಾನಸೌಧಕ್ಕೆ ಬರುವವರಿಗೆ ಹೀಗೆ ಅನೇಕ ಜನಗಳಿಗೆ ಬಹಳ ತೊಂದರೆಯಾಗಿದೆ. ಬೆಂಗಳೂರು ನಗರದಲ್ಲಿ ಸುಮಾರು ೨೦-೨೨ ಆಟೋರಿಕ್ಷಾಗಳು ಓಡಾಡುತ್ತಿದ್ದು ಇಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ಪ್ರಯಾಣಿಕರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಕೂಡಲೇ ಅವರನ್ನು ಕರೆದು ಮಾತುಕತೆಯಾಡಿ ಈ ಚಳುವಳಿ ಅಂತ್ಯವಾಗುವುದಕ್ಕೆ ಮಾರ್ಗ ಹುಡುಕಬೇಕು ಎಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ ಹಾಗೂ ಇದರ ಬಗ್ಗೆ ಸರ್ಕಾರದ ನಿರ್ಧಾರವೇನು ಎಂದು ನಾನು ತಿಳಿಯಬಯಸುತ್ತೇನೆ.

ಅಧ್ಯಕ್ಷರು.—ಸಾರಿಗೆ ಮಂತ್ರಿಗಳು ಬಂದಾಗ ಇದನ್ನು ಪ್ರಸ್ತಾಪ ಮಾಡಿ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯ ಮಂತ್ರಿಗಳೇ ಇದ್ದಾರೆ.

ಶ್ರೀ ವೀರೇಂದ್ರ ಪಾಟೀಲ್ (ಸನ್ಮಾನ್ಯ ಮುಖ್ಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೇ, ಬಜೆಟ್‌ನಿಂದ ಪೆಟ್ರೋಲ್ ದರ ಹೆಚ್ಚಾಯಿತು. ಸ್ವಾಭಾವಿಕವಾಗಿ ಇದರ ಪರಿಣಾಮ ಎರಡನೇ ದರ್ಜೆಯವರ ಮೇಲೆ ಆಗುತ್ತದೆ. ಆಟೋರಿಕ್ಷಾದವರು ಕೂಡಾ ತಮ್ಮ ವಾಹನಗಳಿಗೆ ಪೆಟ್ರೋಲ್‌ನ್ನು ಉಪಯೋಗ ಮಾಡುತ್ತಾರೆ. ಅದಕ್ಕಾಗಿ ನಮ್ಮ ದರವನ್ನು ಕೂಡಾ ಹೆಚ್ಚಿಸಬೇಕು ಎಂದು ಅವರು ಕೇಳುತ್ತಿದ್ದಾರೆ. ನನ್ನ ಹತ್ತಿರ ಕೆಲವು ಜನ ಬಂದಿದ್ದರು. ಅವರಲ್ಲಿ ಒಂದೇ ಯೂನಿಯನ್ ಇಲ್ಲ, ಅನೇಕ ಯೂನಿಯನ್‌ಗಳಿವೆ. ನಮಗೂ ಕೂಡಾ ರೇಟನ್ನು ಜಾಸ್ತಿ ಮಾಡಬೇಕು ಎಂದು ಹೇಳಿ ಬಂದಿದ್ದರು. ನಾನು ನಿಮಗೂ ಕೂಡಾ ರೇಟನ್ನು ಹೆಚ್ಚು ಮಾಡಬೇಕು, ಇದರ ಬಗ್ಗೆ ನಾನು ಟ್ರಾನ್ಸ್‌ಪೋರ್ಟ್ ಕಮಿಷನರ್ ಹತ್ತಿರ ಹೇಳುತ್ತೇನೆ ಎಂದು ಅವರಿಗೆ ಹೇಳಿದ್ದೆ. ಆ ರೀತಿ ನಾನು ಟ್ರಾನ್ಸ್‌ಪೋರ್ಟ್ ಕಮಿಷನರ್‌ರವರಿಗೆ ಹೇಳಿದೆ. ಟ್ರಾನ್ಸ್‌ಪೋರ್ಟ್ ಕಮಿಷನರ್‌ರವರು ಕೂಡಾ ಅವರೆಲ್ಲರ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದಾರೆ. ಒಂದು ಕಿಲೋಮೀಟರ್‌ಗೆ ಎಷ್ಟು ದರ ಇರಬೇಕೆಂಬುದು ನನಗೆ ಸವಿಸ್ತಾರವಾಗಿ ಗೊತ್ತಿಲ್ಲ. ಏಕೆಂದರೆ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಅವರು ಇದನ್ನು ಪರಿಶೀಲನೆ ಮಾಡುತ್ತಿದ್ದಾರೆ ಈಗ ಎರಡು ರೂಪಾಯಿ ಎಂಬತ್ತು ಪೈಸೆ ಎನ್ನತಕ್ಕಂಥ ದ್ವನ್ನು ನಿಗದಿ ಮಾಡಿದ್ದಾರೆ, ಕೆಲವು ಯೂನಿಯನ್‌ಗಳು ಇದಕ್ಕೆ ಒಪ್ಪಿಕೊಂಡಿವೆ. ನನ್ನ ಇನ್‌ಫರ್ಮೇಷನ್ ಪ್ರಕಾರ, ಬಂದೆರಡು ಯೂನಿಯನ್‌ನವರು ಇದನ್ನು ಒಪ್ಪಿಲ್ಲ. ಅದಕ್ಕಾಗಿ ಅವರು ಮೂರು ರೂಪಾಯಿ ಬೇಕು ಎನ್ನತಕ್ಕಂಥ ಪ್ರಶ್ನೆ ಈಗ ಎದ್ದಿದೆ. ಆದರಿಂದಾಗಿ ಅವರು ಮುಷ್ಕರವನ್ನು ಹೂಡಿದ್ದಾರೆ. ಈಗ ಮಾನ್ಯ ವಾಟಾಳ್ ನಾಗರಾಜ್‌ರವರಾಗಲಿ, ಮಾನ್ಯ ಸಿಂಧ್ಯಾರವರಾಗಲೀ, ಅವರು ಇಪ್ಪತ್ತು-ಇಪ್ಪತ್ತೈದು ಸಾವಿರ ಜನ ಇದ್ದಾರೆ. ಅದಕ್ಕೆ ಅವರ ಕೇಳುವುದೆಲ್ಲಾ ಕೊಡಬೇಕು ಎಂದು ಹೇಳಿದರೆ.....

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾವು ಅದನ್ನು ಹೇಳಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.— ಅದಕ್ಕೆ ನಾನು ಹೇಳುವುದೇನೆಂದರೆ, ಈ ಪ್ರಯಾಣ ಮಾಡುವ ಜನರ ಸಮಸ್ಯೆಯನ್ನು ನಾವು ನೋಡಬೇಕಾಗುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ—ನೀವು ಸ್ವಲ್ಪ ಯೀಲ್ಡ್ ಆಗಬೇಕು. ಏಕೆಂದರೆ ತಪ್ಪು ಭಾವನೆ ನಮ್ಮ ಬಗ್ಗೆ ಬರುವಾರದು. ಸಾಮಾನ್ಯವಾಗಿ ಆಟೋರಿಕ್ಷಾ ಡ್ರೈವರ್‌ಗಳು ಸ್ಟ್ರೈಕ್ ಮಾಡಿದಾಗ ನಾವು ಬೆಂಗಳೂರು ನಗರದಲ್ಲಿ ಇರತಕ್ಕಂಥ ಪ್ರಯಾಣಿಕರಿಗೆ ಮತ್ತು ಹೊರಗಡೆಯಿಂದ ಬರತಕ್ಕಂಥ ಪ್ರಯಾಣಿಕರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಬಿ. ಟಿ ಎಸ್. ಬಸ್ಸುಗಳ ಫೆಸಿಲಿಟೀಸನ್ನು ಹೆಚ್ಚು ಮಾಡುತ್ತೇವೆ. ಆದರೆ ಈಗ ಇದನ್ನೂ ಮಾಡಿಲ್ಲ. ಇದರಿಂದಾಗಿ ಪ್ರಯಾಣಿಕರಿಗೆ ಬಹಳ ತೊಂದರೆಯಾಗಿದೆ. ಸಾಮಾನ್ಯವಾಗಿ ಐದು ನೂರೊ ಅಥವಾ ಒಂದು ಸಾವಿರ ಟ್ರಿಪ್ಪನ್ನೊ ಹೆಚ್ಚು

ಮಾಡುವುದು, ಯಾವಾಗಲೂ ಮಾಡಿಕೊಂಡು ಬಂದಂಥ ಪದ್ಧತಿ. ಆದೂ ಆಗಿಲ್ಲ. ಪ್ರಯಾಣಿಕರಿಗೆ ಬಹಳ ಹೆಚ್ಚಿನ ತೊಂದರೆಯಾಗಿದೆ. ಸಾರಿಗೆ ಮಂತ್ರಿಗಳೂ ಸಹಿತ ಸಿಕ್ಕಿಲ್ಲಿ ಎನ್ನತಕ್ಕಂಥದ್ದು ಪತ್ರಿಕೆಯಲ್ಲಿ ವರದಿಯಾಗಿದೆ. ಆದ್ದರಿಂದ ಈ ಸಂದರ್ಭದಲ್ಲಿ ಇದನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಮತ್ತೆ ಇನ್ನೊಂದು ವಿಷಯವನ್ನು ಹೇಳುವುದಾದರೆ ಅನೇಕ ಜನ ಆಟೋರಿಕ್ಷಾ ಚಾಲಕರು ಪೆಟ್ರೋಲ್ ಜೊತೆಗೆ ಸೀಮೆ ಎಣ್ಣೆಯನ್ನು ಸೇರಿಸಿ ಗಾಡಿಯನ್ನು ಓಡಿಸುವುದರಿಂದ ಪರಿಸರಕ್ಕೂ ಕೂಡಾ ಬಹಳ ತೊಂದರೆಯಾಗಿದೆ. ಇವೆಲ್ಲದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಾ ಎಂದು ನಾವು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಇವತ್ತು ಆಟೋರಿಕ್ಷಾಗಳಿಂದ ಐವತ್ತು ಸಾವಿರ ಜನ ಜೀವನ ಮಾಡುತ್ತಿದ್ದಾರೆ. ಅವರು ಹೇಳಿದ್ದೆಲ್ಲಾ ಕೊಡಿ ಎಂದು ನಾವು ನಿಮ್ಮನ್ನು ಒತ್ತಾಯ ಮಾಡಲಿಲ್ಲ. ಈಗ ಇರುವ ಸಮಸ್ಯೆಯನ್ನು ಕೂತು, ಸಂಧಾನದ ಮೂಲಕ ಬಗೆಹರಿಸಿ, ಏಕೆಂದರೆ ಅವರು ಮುಷ್ಕರ ಪ್ರಾರಂಭ ಮಾಡಿ ಒಂದು ದಿವಸ ಆಯಿತು. ಇದರಿಂದ ಇವತ್ತು ಹೊರಗಡೆಯಿಂದ ಬರತಕ್ಕಂಥ ಜನರಿಗೆ ಬಹಳ ಅನಾನುಕೂಲವಾಗಿದೆ. ಪರ್ಯಾಯವಾಗಿ ಬೇರೆ ವ್ಯವಸ್ಥೆಯನ್ನೂ ಕೂಡಾ ಮಾಡಿಲ್ಲ. ಅಂಥ ಪರಿಸ್ಥಿತಿ ಉದ್ಭವವಾಗಿದೆ. ಇದನ್ನು ತಮ್ಮ ಗಮನಕ್ಕೆ ತಂದಿದ್ದೇವೆ.

† ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ನಾನೂ ಸಹ ಅದನ್ನೇ ಹೇಳುತ್ತಿದ್ದೆ, ಅವರು ಬೇಡಿದಷ್ಟು ಕೊಡಬೇಕೆಂಬ ಪ್ರಶ್ನೆ ಇದರಲ್ಲಿದೆ. ಆದರಲ್ಲೆ ಟ್ರಾನ್ಸ್‌ಪೋರ್ಟ್ ಕಮೀಷನರ್ ಅವರಿಲ್ಲರ ಜೊತೆ ಸಮಾಲೋಚನೆ ಮಾಡಿ ಒಂದು ಯೋಗ್ಯವಾದ ಫೇರ್ ಅನ್ನು ನಿಗದಿ ಮಾಡಿದ್ದಾರೆ. ಬಹಳಷ್ಟು ಯೂನಿಯನ್‌ನವರು ಅದಕ್ಕೆ ಸಮಾಧಾನ ಪಟ್ಟು ಕೊಂಡಿದ್ದಾರೆ. ಆದರೆ ಒಂದೆರಡೂ ಯೂನಿಯನ್‌ನವರು ಇದಕ್ಕೆ ಒಪ್ಪುವ ಹಾಗೆ ಇಲ್ಲ. ಇನ್ನೂ ಹೆಚ್ಚು ಬೇಕು ಎಂದು ಮುಷ್ಕರ ಹೂಡಿ ಈ ಪರಿಸ್ಥಿತಿಯನ್ನು ತಂದಿದ್ದಾರೆ. ಇದಕ್ಕೆ ಈಗಾಗಲೇ ನಮ್ಮ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಕಡೆ ತಾವು ತಮ್ಮ ಗಮನವನ್ನು ಸೆಳೆದಿದ್ದೀರಿ ಎಂದು ನನಗೆ ಅನಿಸುತ್ತದೆ. ಆಟೋ ಯೂನಿಯನ್‌ರವರ ಜೊತೆ ನಮ್ಮ ಸಹೋದ್ಯೋಗಿ ಸಾರಿಗೆ ಖಾತೆ ಮಂತ್ರಿಗಳು ಸಮಾಲೋಚನೆ ಮಾಡುತ್ತಿದ್ದಾರೆ. ಅವರು ಏನು ಅಭಿಪ್ರಾಯಕ್ಕೆ ಬರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನಾನು ಹೇಳುವುದು ಸರ್ಕಾರ ಈ ದೃಷ್ಟಿಯಲ್ಲಿ ಇವೊತ್ತು ಚಾಲಕರನ್ನಷ್ಟೇ ನೋಡುವಂತೆ ಇಲ್ಲ, ವಾಹನಗಳಲ್ಲಿ ಸಂಚಾರ ಮಾಡುವ ಜನರ ಸಮಸ್ಯೆಯನ್ನು ಸಹ ನೋಡಬೇಕಾಗುತ್ತದೆ. ಇದರಲ್ಲಿ ಅವರಿಗೆ ಯಾವುದೇ ಅನ್ಯಾಯ ಆಗದಂತೆ ಒಂದು ಯೋಗ್ಯವಾದ ರೇಟ್ ಅನ್ನು ನಿಗದಿ ಮಾಡಿದಾಗ ಅವರು ಒಪ್ಪಿಕೊಳ್ಳಬೇಕು. ಅದು ಯೋಗ್ಯವಾಗಿಲ್ಲ ಎಂದು ಹೇಳಿ ಅವರು ನಮ್ಮ ಆಫೀಸರ್ಸ್‌ಗಳನ್ನು ಕನ್‌ವಿನ್ಸ್ ಮಾಡಿಸಬಹುದು. ಅವರ ಬೇಡಿಕೆಗಳಿಗೆ ಅನುಗುಣವಾಗಿ ಯೋಗ್ಯವಾದ ಬೆಲೆಯನ್ನು ನಿಗದಿ ಮಾಡಿದ್ದರೂ ಸಹ ಅವರನ್ನು ತಪ್ಪು ದಾರಿಗೆ ಎಳೆಯಲು ಯಾರು ಪ್ರಯತ್ನ ಮಾಡುತ್ತಿದ್ದಾರೋ ನನಗೆ ಗೊತ್ತಿಲ್ಲ. ಇದರ ಬಗ್ಗೆ ನನ್ನಲ್ಲಿ ಈಗ ಸವಿಸ್ತಾರವಾದ ಮಾಹಿತಿ ಇಲ್ಲ. ಸಾರಿಗೆ ಮಂತ್ರಿಗಳು ಇದರ ಕಡೆಗೆ ಗಮನ ಹರಿಸಿದ್ದಾರೆ. ಸಂಬಂಧ ಪಟ್ಟ ಯೂನಿಯನ್‌ನ ಪದಾಧಿಕಾರಿಗಳ ಜೊತೆ ಸಮಾಲೋಚನೆ ಮಾಡುತ್ತಾ ಇದ್ದಾರೆ. ಇವೊತ್ತು ಸಾಯಂಕಾಲದವರೆಗೆ ಏನಾದರೂ ಪರಿಹಾರ ಕಂಡು ಹಿಡಿಯಬಹುದೆಂಬ ಆಸೆಯನ್ನು ನಾನು ಇಟ್ಟು ಕೊಂಡಿದ್ದೇನೆ,

ಗಮನ ಸೆಳೆಯುವ ಸೂಚನೆಗಳು

ನಿರಂತರವಾಗಿ ಆನೆ ದಂತಗಳ ದರೋಡೆ ನಡೆಸಿ, ಅನೇಕರ ಪ್ರಾಣ ಹತ್ಯೆ ಮಾಡಿ ಗಂಭೀರ ಪರಿಸ್ಥಿತಿ ನಿರ್ಮಾಣ ಮಾಡಿರುವ ದರೋಡೆಕೋರ ವೀರಪ್ಪನ್‌ನನ್ನು ಬಂಧಿಸದೆ ಇರುವ ಬಗ್ಗೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಆನೆ ದಂತಗಳನ್ನು ನಿರಂತರವಾಗಿ ದರೋಡೆ ನಡೆಸಿ ಅನೇಕರ ಪ್ರಾಣ ಹತ್ಯೆಮಾಡಿ ಗಂಭೀರ ಪರಿಸ್ಥಿತಿ ನಿರ್ಮಾಣ ಮಾಡಿರುವ ದರೋಡೆ ಕೋರ ವೀರಪ್ಪನ್‌ನನ್ನು ಬಂಧಿಸದೆ ಇರುವ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಅಪ್ಪಣೆಯನ್ನು ಕೋರಿ ಈ ಹೇಳಿಕೆಯನ್ನು ಮಾಡುತ್ತಿದ್ದೇನೆ.